**ಕರ್ನಾಟಕ ಸರ್ಕಾರ**
**Government of Karnataka**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯಪಡೆಮುಖ್ಯಸ್ಥರು)ರವರ ಕಛೇರಿ
Office of the
Principal Chief Conservator of Forests
(Head of Forest Force)

ಅರಣ್ಯ ಭವನ, 18ನೇ ಅಡ್ಡ ರಸ್ತೆ
ಮಲ್ಲೇಶ್ವರಂ, ಬೆಂಗಳೂರು-03
Aranya Bhavan, 18th Cross
Malleshwaram, Bengaluru-03
Telephone: 080 2336 7123
Email: pccfkar@gmail.com

**No.:** KFD/HOFF/A2(EST)/6/2020-PnR-KFD **E- 209409**
ದಿನಾಂಕ: 23.10.2025

## ಅಧಿಸೂಚನೆ

ದಿನಾಂಕ:20.09.2025ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯ ಸಭೆಯಲ್ಲಿ ತೀರ್ಮಾನಿಸಿದಂತೆ ಅರಣ್ಯ ಇಲಾಖೆಯಲ್ಲಿ ರಾಜ್ಯ ಮಟ್ಟದ ಉಳಿಕೆ ಮೂಲ ವೃಂದದ ಈ ಕೆಳಕಂಡ ಅಧೀಕ್ಷಕರುಗಳಿಗೆ **ವ್ಯವಸ್ಥಾಪಕರ ಹುದ್ದೆಗೆ** [ವೇತನ ಶ್ರೇಣಿ: ರೂ.65950-1650-74200-1900-85600-2300-99400-2700-115600-3100-124900] **ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 42-ಬಿ ಅನ್ವಯವಾಗುವಂತೆ ಸ್ಥಾನಪನ್ನಾ ಬಡ್ತಿ ನೀಡಿ ಅವರುಗಳ ಹೆಸರಿನ ಮುಂದೆ ನಮೂದಿಸಿರುವ ಹುದ್ದೆಗಳಿಗೆ ಈ ಕೆಳಕಂಡ ಷರತ್ತಿಗೊಳ್ಳಪಟ್ಟು ನೇಮಿಸಲಾಗಿದೆ.**

| **ಕ್ರ. ಸಂ.** | **ಹೆಸರು, ಹುದ್ದೆ ಮತ್ತು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಛೇರಿ (ಶ್ರೀಯುತರು)** | **ವ್ಯವಸ್ಥಾಪಕರ ವೃಂದಕ್ಕೆ ಸ್ಥಾನಪನ್ನ ಬಡ್ತಿ ನೀಡಿ ನೇಮಿಸಿರುವ ಸ್ಥಳ** |
|---|---|---|
| 1 | **ನಾಗಮ್ಮ ಬಿ. ಗೌಡ,** ಅಧೀಕ್ಷಕರು<br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಹಳಿಯಾಳ ವಿಭಾಗ, ಹಳಿಯಾಳ. | **ವ್ಯವಸ್ಥಾಪಕರು**<br>ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿ, ಅರಣ್ಯ ಭವನ, ಬೆಂಗಳೂರು ***[ಖಾಲಿ ಹುದ್ದೆ]*** |
| 2 | **ಸೈಯದ್ ಆಸೀಫ್ ಪಾಷ,** ಅಧೀಕ್ಷಕರು<br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು ಸಾಮಾಜಿಕ ಅರಣ್ಯ ವಿಭಾಗ, ಚಿಕ್ಕಮಗಳೂರು. | **ವ್ಯವಸ್ಥಾಪಕರು**<br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ರಾಮನಗರ ವಿಭಾಗ, ರಾಮನಗರ<br>***[ಖಾಲಿ ಹುದ್ದೆ]*** |
| 3 | **ನಾಗರಾಜ್ ಶಿವಾಜಿ ಮಾನೆ,** ಅಧೀಕ್ಷಕರು<br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಶಿರಸಿ ವಿಭಾಗ, ಶಿರಸಿ. | **ವ್ಯವಸ್ಥಾಪಕರು**<br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕುಂದಾಪುರ ವಿಭಾಗ, ಕುಂದಾಪುರ<br>***[ಖಾಲಿ ಹುದ್ದೆ]*** |
| 4 | **ರವಿಕುಮಾರ್ ಸಿ. ತಳವಾರ್**, ಅಧೀಕ್ಷಕರು<br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೆಳಗಾವಿ ವಿಭಾಗ, ಬೆಳಗಾವಿ | **ವ್ಯವಸ್ಥಾಪಕರು**<br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ವಿಜಯಪುರ ವಿಭಾಗ, ವಿಜಯಪುರ<br>***[ಖಾಲಿ ಹುದ್ದೆ]*** |
| 5 | **ಚಂದ್ರಕಾಂತ್ ಕೆ. ಸಾರಥರಾಮ್**<br>ಅಧೀಕ್ಷಕರು<br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕಾರ್ಯಯೋಜನೆ ಘಟಕ, ದಾರವಾಡ. | **ವ್ಯವಸ್ಥಾಪಕರು**<br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕೋಲಾರ ವಿಭಾಗ, ಕೋಲಾರ<br>***[ಖಾಲಿ ಹುದ್ದೆ]*** |
| 6 | **ಪಟ್ಟದಕಲ್ ಬಿ. ಹೆಚ್.,** ಅಧೀಕ್ಷಕರು<br>ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾನವ ಸಂಪನ್ಮೂಲ ಅಭಿವೃದ್ಧಿ)ರವರ ಕಛೇರಿ, ಗುಂಗರಗಟ್ಟಿ, ಧಾರವಾಡ. | **ವ್ಯವಸ್ಥಾಪಕರು**<br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಚಿಕ್ಕಬಳ್ಳಾಪುರ<br>***[ಖಾಲಿ ಹುದ್ದೆ]*** |

prabhavaa.com

| ಕ್ರ. ಸಂ. | ಹೆಸರು, ಹುದ್ದೆ ಮತ್ತು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಛೇರಿ (ಶ್ರೀಯುತರು) | ವ್ಯವಸ್ಥಾಪಕರ ವೃಂದಕ್ಕೆ ಸ್ಥಾನಪನ್ನ ಬಡ್ತಿ ನೀಡಿ ನೇಮಿಸಿರುವ ಸ್ಥಳ |
|---|---|---|
| 7 | **ಚನ್ನಪ್ಪ ಬಿ. ಹುಣಸೀಕಟ್ಟಿ**, ಅಧೀಕ್ಷಕರು<br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೆಳಗಾವಿ ವಿಭಾಗ, ಬೆಳಗಾವಿ. | **ವ್ಯವಸ್ಥಾಪಕರು**<br>ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು ವೃತ್ತ, ಚಿಕ್ಕಮಗಳೂರು ***[ಖಾಲಿ ಹುದ್ದೆ]*** |
| 8 | **ಸೌಭಾಗ್ಯ ಹೆಚ್. ಎಸ್.**, ಅಧೀಕ್ಷಕರು<br>ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು)ರವರ ಕಛೇರಿಯ ಆಡಿಟ್ ಶಾಖೆ, ಬೆಂಗಳೂರು. | **ವ್ಯವಸ್ಥಾಪಕರು**<br>ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಾಮಾಜಿಕ ಅರಣ್ಯ ಮತ್ತು ಯೋಜನೆಗಳು)ರವರ ಕಛೇರಿ, ಅರಣ್ಯ ಭವನ, ಬೆಂಗಳೂರು ***[ಖಾಲಿ ಹುದ್ದೆ]*** |
| 9 | **ಸುಧಾಮಣಿ**, ಅಧೀಕ್ಷಕರು<br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮೈಸೂರು ವಿಭಾಗ, ಮೈಸೂರು | **ವ್ಯವಸ್ಥಾಪಕರು**<br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬಿ.ಆರ್.ಟಿ. ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ ***[ಖಾಲಿ ಹುದ್ದೆ]*** |
| 10 | **ಸವಿತಾ ಎಂ. ಡೊಣ್ಣಿ**, ಅಧೀಕ್ಷಕರು<br>ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಧಾರವಾಡ ವೃತ್ತ, ಧಾರವಾಡ. | **ವ್ಯವಸ್ಥಾಪಕರು**<br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹುಣಸೂರು ವಿಭಾಗ, ಹುಣಸೂರು ***[ಖಾಲಿ ಹುದ್ದೆ]*** |

**ಷರತ್ತುಗಳು:**

1. ಸಂಬಂಧಿಸಿದ ನೌಕರರ ಜೇಷ್ಠತಾ ಪಟ್ಟಿಯಲ್ಲಿನ ಹಿರಿತನ ಮತ್ತು ಇಲಾಖಾ ವಿಚಾರಣೆ/ ಲೋಕಾಯುಕ್ತ ಪ್ರಕರಣಗಳು/ಕ್ರಿಮಿನಲ್ ಮೊಕದ್ದಮೆ ಪ್ರಕರಣಗಳ ಕುರಿತಂತೆ ಈ ಕಛೇರಿಗೆ ಲಭ್ಯವಿರುವ/ಸ್ವೀಕೃತವಾದ ಮಾಹಿತಿ/ದಾಖಲೆಗಳ ಆಧಾರದ ಮೇರೆಗೆ ಈ ಆದೇಶವನ್ನು ಹೊರಡಿಸಲಾಗಿದೆ. ಒಂದು ವೇಳೆ ಯಾವುದೇ ಹಂತದಲ್ಲಿ, ಯಾವುದೇ ಅಧಿಕಾರಿಗಳ ವಿರುದ್ಧ ವ್ಯತಿರಿಕ್ತ ಷರಾ ಕಂಡು ಬಂದಲ್ಲಿ/ ಶಿಸ್ತು ಕ್ರಮಕ್ಕೆ ಒಳಪಟ್ಟಿದ್ದಲ್ಲಿ/ ಅನರ್ಹತೆ ಕಂಡು ಬಂದಲ್ಲಿ ಕೂಡಲೇ ಅಂತಹ ಅಧಿಕಾರಿಗಳ ಮುಂಬಡ್ತಿ ಆದೇಶವನ್ನು ರದ್ದುಪಡಿಸಲಾಗುವುದು.

2. ಕರ್ನಾಟಕ ನಾಗರಿಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 4-ಎ ರನ್ವಯ ಈ ಮೇಲಿನ ಸರ್ಕಾರಿ ನೌಕರರುಗಳು ವ್ಯವಸ್ಥಾಪಕರ ವೃಂದಕ್ಕೆ ಸ್ಥಾನಪನ್ನ ಬಡ್ತಿಯನ್ನು ತ್ಯಜಿಸಲು (Forgoing Promotion) ಇಚ್ಚಿಸಿದಲ್ಲಿ ಅವರು ಈ ಆದೇಶವು ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಿದ ದಿನಾಂಕದಿಂದ/ಸಂಬಂಧಿಸಿದ ಕಛೇರಿಗೆ ಇ-ಮೇಲ್ ಮುಖಾಂತರ ತಲುಪಿದ ದಿನಾಂಕದಿಂದ **ಹದಿನೈದು (15) ದಿನಗಳೊಳಗೆ ಸಮರ್ಪಕವಾದ ಕಾರಣಗಳೊಂದಿಗೆ ಲಿಖಿತ ರೂಪದಲ್ಲಿ ಮನವಿಯನ್ನು ಈ ಕಚೇರಿಗೆ ತಪ್ಪದೇ ಸಲ್ಲಿಸುವುದು.** ಈ ನಿಗದಿತ ಅವಧಿಯಲ್ಲಿ ಅಂತಹ ಲಿಖಿತ ಮನವಿಯು ಈ ಕಚೇರಿಯಲ್ಲಿ ಸ್ವೀಕೃತವಾಗದೇ ಇದ್ದಲ್ಲಿ **ಅಥವಾ** ಈ ಮೇಲಿನ ಅವಧಿಯಲ್ಲಿ ಪ್ರಸ್ತುತ ಕಛೇರಿಯಿಂದ ಕಾರ್ಯ ವಿಮುಕ್ತಿ ಹೊಂದಿ ನಿಯಮಾನುಸಾರ ಈ ಆದೇಶದಲ್ಲಿ ನಿಗದಿಪಡಿಸಿದ ಹುದ್ದೆಯಲ್ಲಿ ಕಾರ್ಯವರದಿ ಮಾಡದೇ ಇದ್ದಲ್ಲಿ, ಸಂಬಂಧಪಟ್ಟವರು ಕರ್ನಾಟಕ ನಾಗರೀಕ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರನ್ವಯ ಶಿಸ್ತು ಕ್ರಮಕ್ಕೆ ಒಳಪಡುತ್ತಾರೆ. **ಇಂತಹ ಎಲ್ಲಾ ಸಂದರ್ಭದಲ್ಲಿ ಸಂಬಂಧಿಸಿದ ನಿಯಂತ್ರಣಾಧಿಕಾರಿಗಳು ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲು ಪ್ರಸ್ತಾವನೆಯನ್ನು ತಪ್ಪದೆ ಈ ಕಛೇರಿಗೆ ಸಲ್ಲಿಸತಕ್ಕದ್ದು.**

3. ಮುಂಬಡ್ತಿಯನ್ನು ಹೊಂದಿರುವ ಸರ್ಕಾರಿ ನೌಕರರಿಗೆ ಈ ಆದೇಶದಂತೆ **ನಿಗದಿತ ಸಮಯದಲ್ಲಿ ಪ್ರಸ್ತುತ ಕಛೇರಿಯಿಂದ ಕಾರ್ಯ ವಿಮುಕ್ತಿಗೊಳಿಸಲು ಸಂಬಂಧಿಸಿದ ಕಛೇರಿಯ ಮುಖ್ಯಸ್ಥರು ಜವಾಬ್ದಾರರಾಗಿರುತ್ತಾರೆ**. ವೃತ್ತ/ವಿಭಾಗ/ಘಟಕ ಕಛೇರಿಯಲ್ಲಿ ಪ್ರಸ್ತುತ ಕಾರ್ಯ

prabhavaa.com

ನಿರ್ವಹಿಸುತ್ತಿರುವ ಅಧೀಕ್ಷಕರು ನಿಗದಿತ ಸಮಯದಲ್ಲಿ ಕಾರ್ಯ ವಿಮುಕ್ತಿಹೊಂದಲು ಸಂಬಂದಪಟ್ಟ ಘಟಕದ ಮುಖ್ಯಸ್ಥರು / ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿ ಇವರು ಖಚಿತಪಡಿಸುವುದು.

Digitally signed by
MEENAKSHI NEGI
Date: 28-10-2025
10:52:24

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
(ಅರಣ್ಯ ಪಡೆ ಮುಖ್ಯಸ್ಥರು)

**ಪ್ರತಿ ಮಾಹಿತಿಗಾಗಿ /ಹಾಗೂ ಮುಂದಿನ ಕ್ರಮಕ್ಕಾಗಿ** *[ಇಲಾಖಾ ಜಾಲತಾಣದಲ್ಲಿ ಪ್ರಕಟಿಸುವ/ಇ-ಮೇಲ್ ಮೂಲಕ]*:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಮಹಾಲೇಖಪಾಲರು (GE CELL-1), ಕರ್ನಾಟಕ, ಬೆಂಗಳೂರು.
3. ಎಲ್ಲಾ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು.
4. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾಹಿತಿ ಸಂವಹನ ತಂತ್ರಜ್ಞಾನ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು- **ಈ ಅಧಿಸೂಚನೆಯನ್ನು ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು.**
5. ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು.
6. ಎಲ್ಲಾ ವೃತ್ತಗಳ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು/ಅರಣ್ಯ ಸಂರಕ್ಷಣಾಧಿಕಾರಿಗಳು.
7. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
8. ಸಂಬಂಧಿಸಿದ ಅಧಿಕಾರಿಗಳಿಗೆ.

prabhavaa.com